ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದ್‌ರಾವ್ ವೃತ್ತ, ಬೆಂಗಳೂರು

ಸಂಖ್ಯೆ: ಎಲ್ಆರ್ಓ/118/2019-20 ದಿನಾಂಕ: 18 -11-2019

## ಸುತ್ತೋಲೆ

ವಿಷಯ:- ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ(Dy.DHEO) ಹುದ್ದೆಯಿಂದ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ(DHEO) ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ:- ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ(Dy.DHEO) ವೃಂದ ಅಂತಿಮ ಜ್ಯೇಷ್ಠತಾ ಪಟ್ಟಿ ಸಂಖ್ಯೆ: ಎಫ್‌ಡಬ್ಲ್ಯೂಎಲ್(2)20/2019-20 ದಿ:07.11.2019

******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ(Dy.DHEO) ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಜ್ಯೇಷ್ಠತಾ ಸಂಖ್ಯೆ: 01 ರಿಂದ 13 ರ ವರೆಗೆ (ಹೈದ್ರಾಬಾದ್-ಕರ್ನಾಟಕ) ಮತ್ತು ಜ್ಯೇಷ್ಠತಾ ಸಂಖ್ಯೆ: 01 ರಿಂದ 17 ರ ವರೆಗೆ (ಹೈ-ಕ ಹೊರೆತುಪಡಿಸಿ) ಉಲ್ಲೇಖಿತ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಈ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ(Dy.DHEO) ಹುದ್ದೆಯಿಂದ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ(DHEO) ಹುದ್ದೆಗೆ ಪದೋನ್ನತಿ ನೀಡಲು ಕ್ರಮಕೈಗೊಳ್ಳುವ ಸಂಬಂಧ ಜ್ಯೇಷ್ಠತಾ ಸಂಖ್ಯೆ: 01 ರಿಂದ 13 ರ ವರೆಗೆ (ಹೈದ್ರಾಬಾದ್-ಕರ್ನಾಟಕ) ಮತ್ತು ಜ್ಯೇಷ್ಠತಾ ಸಂಖ್ಯೆ: 01 ರಿಂದ 17 ರ ವರೆಗೆ (ಹೈ-ಕ ಹೊರೆತುಪಡಿಸಿ) ವರೆಗೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ(Dy.DHEO) ಹಾಗೂ ಸದರಿ ಹುದ್ದೆಯಲ್ಲಿ ಕನಿಷ್ಠ 3 ವರ್ಷ ಸೇವೆ ಸಲ್ಲಿಸಿರುವ ನೌಕರರು ಈ ಕೆಳಕಂಡ ದಾಖಲಾತಿಗಳನ್ನು ದಿನಾಂಕ: 28-11-2019 ರೊಳಗೆ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಸಲ್ಲಿಸಲು ಸೂಚಿಸಿದೆ.

01. ನೇಮಕಾತಿ ಹೊಂದಿದ ಹುದ್ದೆ ಹಾಗೂ ಆದೇಶ ಪ್ರತಿ
02. ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿರುವ ಪ್ರತಿ
03. ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
04. ಪರಿಶಿಷ್ಟ ಜಾತಿ/ಪಂಗಡದ ನೌಕರರು ಸಂಬಂದಿಸಿದ ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರ
05. ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ(Dy.DHEO) ಪದೋನ್ನತಿ ಹೊಂದಿದ ಆದೇಶ ಪ್ರತಿಗಳು
06. ಕನ್ನಡ ವಿನಾಯಿತಿ ಪ್ರಮಾಣ ಪತ್ರ/ಅಕೌಟ್ಸ್ ಹೈಯರ್/ಜನರಲ್ ಲಾ-1/ಕಂಪ್ಯೂಟರ್ ಲಿಟ್ರಸಿ ಪ್ರಮಾಣ ಪತ್ರಗಳು
07. ನೌಕರರ ವಿರುದ್ಧ ಇಲಾಖಾ ವಿಚಾರಣೆ/ನ್ಯಾಯಾಂಗ ತನಿಖೆ/ಲೋಕಾಯುಕ್ತ/ಭ್ರಷ್ಟಾಚಾರ ನಿಗ್ರಹ ದಳ ಪ್ರಕರಣ ಬಾಕಿ ಇಲ್ಲದಿರುವ ಬಗ್ಗೆ ದೃಡೀಕರಣ ಪತ್ರ
08. ಸಮಾಜ ವಿಜ್ಞಾನದಲ್ಲಿ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರ
09. ಅಂಗೀಕೃತ ವಿಶ್ವವಿದ್ಯಾನಿಯಲದಲ್ಲಿ ಪಡೆದಿರುವ ಆರೋಗ್ಯ ಶಿಕ್ಷಣ ಕೋರ್ಸ್‌ನ ಡಿಪ್ಲೋಮಾ ಪ್ರಮಾಣ ಪತ್ರ
10. ಕಳೆದ ಐದು (05) ವರ್ಷಗಳ ರಹಸ್ಯ ವರದಿ (2014-15, 2015-16, 2016-17, 2017-18 ಮತ್ತು 2018-19) (ವಿಶೇಷ ಕಾರ್ಯನಿರ್ವಾಹಣ ವರದಿ ಪರಿಗಣಿಸುವುದಿಲ್ಲ)

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ.ಸೇವೆಗಳು
ಬೆಂಗಳೂರು

ಇವರಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ ಮಾಹಿತಿಗಾಗಿ ಸಲ್ಲಿಸಿದೆ:

01. ಮಾನ್ಯ ಆಯುಕ್ತರ ಆಪ್ತ ವಿಭಾಗ, ಆರೋಗ್ಯ ಮತ್ತು ಕು.ಕ. ಸೇ.ನಿರ್ದೇಶನಾಲಯ, ಬೆಂಗಳೂರು.
02. ಮಾನ್ಯ ನಿರ್ದೇಶಕರ ಆಪ್ತ ವಿಭಾಗ, ಆರೋಗ್ಯ ಮತ್ತು ಕು.ಕ.ಸೇ.ನಿರ್ದೇಶನಾಲಯ, ಬೆಂಗಳೂರು